بسم الله الرحمن الرحيم

# ಪ್ರವಾದಿ ಜನ್ಮ ದಿನಾಚರಣೆ ಇಸ್ಲಾಮಿಕವೇ ?   الاحتفال بالمولد

ಪ್ರವಾದಿ ಮುಹಮ್ಮದ್(ﷺ)ರವರು ಸೃಷ್ಟಿಗಳಲ್ಲೇ ಅತೀ ಶ್ರೇಷ್ಠರು. ಅವರನ್ನು ಪ್ರೀತಿಸುವುದು ಈಮಾನಿನ ಭಾಗವಾಗಿದೆ. ಅದು ಪ್ರತಿಯೋರ್ವ ಸತ್ಯವಿಶ್ವಾಸಿಯ ಮೇಲೆ ಕಡ್ಡಾಯವೂ ಆಗಿದೆ. ಪ್ರವಾದಿ ಮುಹಮ್ಮದ್(ﷺ)ರವರನ್ನು ಪ್ರೀತಿಸದವನು ಸತ್ಯವಿಶ್ವಾಸಿಯಲ್ಲ. ಯಾಕೆಂದರೆ ಪ್ರವಾದಿ ಮುಹಮ್ಮದ್(ﷺ)ರವರು ಹೇಳಿದರು: "ನಿಮ್ಮ ಮಾತಾ–ಪಿತರು, ಮಕ್ಕಳು ಮತ್ತು ಸರ್ವ ಜನರಿಗಿಂತಲೂ ಹೆಚ್ಚಾಗಿ ನನ್ನನ್ನು ಪ್ರೀತಿಸುವ ವರೆಗೆ ನಿಮ್ಮಲ್ಲಿ ಯಾರೂ ಸತ್ಯ ವಿಶ್ವಾಸಿಯಾಗಲಾರಿರಿ." (ಬುಖಾರಿ,ಮುಸ್ಲಿಮ್).

ಅಂದರೆ ಪ್ರವಾದಿ(ﷺ)ರವರನ್ನು ಸಾಮಾನ್ಯವಾದ ರೀತಿಯಲ್ಲಿ ಪ್ರೀತಿಸಿದರೆ ಸಾಲದು; ಸರ್ವಕ್ಕಿಂತಲೂ ಹೆಚ್ಚಾಗಿ ಅವರನ್ನು ಪ್ರೀತಿಸಿದರೆ ಮಾತ್ರವೇ ಈಮಾನ್ (ವಿಶ್ವಾಸ) ಪೂರ್ತಿಯಾದೀತು. ನಮ್ಮ ಪ್ರೀತಿಯಲ್ಲಿ ಪ್ರಥಮ ಸ್ಥಾನ ಅಲ್ಲಾಹನಿಗೆ; ಎರಡನೇ ಸ್ಥಾನ ರಸೂಲ್(ﷺ)ರವರಿಗೆ; ಇತರರಿಗೆ ಆ ನಂತರದ ಸ್ಥಾನ ಮಾತ್ರವೇ ನೀಡಬೇಕು. ಇದಕ್ಕೆ ವಿರುದ್ಧವಾಗಿ ನಡೆಯುವವರು ಅಲ್ಲಾಹನ ಶಿಕ್ಷೆಗೆ ಅರ್ಹರು. ಅವರು ಅಲ್ಲಾಹನ ಶಿಕ್ಷೆಯ ಆಜ್ಞೆಯನ್ನು ನಿರೀಕ್ಷಿಸಲಿ. ಅಲ್ಲಾಹನು ಹೇಳುತ್ತಾನೆ:

**﴿قُلْ إِن كَانَ آبَاؤُكُمْ وَأَبْنَآؤُكُمْ وَإِخْوَانُكُمْ وَأَزْوَاجُكُمْ وَعَشِيرَتُكُمْ وَأَمْوَالٌ اقْتَرَفْتُمُوهَا وَتِجَارَةٌ تَخْشَوْنَ كَسَادَهَا وَمَسَاكِنُ تَرْضَوْنَهَا أَحَبَّ إِلَيْكُم مِّنَ اللّهِ وَرَسُولِهِ وَجِهَادٍ فِي سَبِيلِهِ فَتَرَبَّصُواْ حَتَّى يَأْتِيَ اللّهُ بِأَمْرِهِ﴾**

(ಓ ಪ್ರವಾದಿಯವರೇ!) ಹೇಳಿರಿ: 'ನಿಮ್ಮ ತಂದೆಯಂದಿರಾಗಲಿ, ನಿಮ್ಮ ಪುತ್ರರಾಗಲಿ, ನಿಮ್ಮ ಸಹೋದರರಾಗಲಿ, ನಿಮ್ಮ ಪತ್ನಿಯರಾಗಲಿ, ನಿಮ್ಮ ಕುಟುಂಬಿಕರಾಗಲಿ, ನೀವು ಸಂಪಾದಿಸಿಟ್ಟಿರುವ ಸಂಪತ್ತಾಗಲಿ, ನಷ್ಟವುಂಟಾಗಬಹುದೆಂದು ನೀವು ಭಯಪಡುವ ವ್ಯಾಪಾರವಾಗಲಿ, ನೀವು ಪ್ರೀತಿಸುವ ವಸತಿಗಳಾಗಲಿ ನಿಮಗೆ ಅಲ್ಲಾಹುವಿಗಿಂತಲೂ, ಅವನ ಸಂದೇಶವಾಹಕರಿಗಿಂತಲೂ ಮತ್ತು ಅವನ ಮಾರ್ಗದಲ್ಲಿರುವ ಹೋರಾಟಕ್ಕಿಂತಲೂ ಹೆಚ್ಚು ಪ್ರಿಯವಾಗಿರುವುದಾದರೆ ಅಲ್ಲಾಹು ತನ್ನ ಆದೇಶವನ್ನು ತರುವವರೆಗೆ ನೀವು ಕಾಯುತ್ತಿರಿ. ಧಿಕ್ಕಾರಿಗಳಾದ ಜನರನ್ನು ಅಲ್ಲಾಹು ಸನ್ಮಾರ್ಗದಲ್ಲಿ ಸೇರಿಸಲಾರನು.' (ಸೂರತು ತೌಬ, 9:24).

ಮೇಲಿನ ಕುರ್‌ಆನ್ ಸೂಕ್ತ ಮತ್ತು ಪ್ರವಾದಿ ವಚನವನ್ನು ಸ್ವಹಾಬಿಗಳು ಅದೇ ರೀತಿ ಅವರ ಜೀವನದಲ್ಲಿ ಅಳವಡಿಸಿದರು. ಪ್ರವಾದಿ ಮುಹಮ್ಮದ್(ﷺ)ರವರ ಕಾಲಿಗೆ ಒಂದು ಮುಳ್ಳು ತಾಗುವುದನ್ನೂ ಅವರು ಸಹಿಸಲಿಲ್ಲ. ಪ್ರವಾದಿ ಸ್ನೇಹದ ಭಾಗವಾಗಿ ಪ್ರವಾದಿ(ﷺ)ರವರ ಮೇಲೆ ಬೀಳುವ ಬಿಲ್ಲು–ಬಾಣಗಳನ್ನು ಸ್ವಂತ ಶರೀರವನ್ನು ತೋರಿಸಿ ತಡೆದರು. ಅಲ್ಲಾಹನ ಮಾರ್ಗದಲ್ಲಿ ಜೀವವನ್ನೇ ಬಲಿ ನೀಡಲು ಪ್ರವಾದಿ ಸ್ನೇಹವು ಅವರಿಗೆ ಪ್ರೇರಕವಾಯಿತು. ಸ್ವಹಾಬಿಗಳು ಅವರ ಸ್ವಂತ ಶರೀರಕ್ಕಿಂತಲೂ ಹೆಚ್ಚಾಗಿ ಪ್ರವಾದಿ(ﷺ)ರವರನ್ನು ಪ್ರೀತಿಸಿದರು. ಇಹಲೋಕದಲ್ಲಿ ಮಾತ್ರವಲ್ಲ; ಪರಲೋಕದಲ್ಲೂ ಪ್ರವಾದಿ(ﷺ)ರವರೊಂದಿಗೆ ಇರಲು ಅವರು ಆಗ್ರಹಿಸಿದರು. ಆದುದರಿಂದ ಪ್ರವಾದಿ(ﷺ)ರವರನ್ನು ಪ್ರೀತಿಸುವುದು ಒಬ್ಬ ಸತ್ಯ ವಿಶ್ವಾಸಿಯ ಬಾಧ್ಯತೆಯಾಗಿದೆ. ಕುರ್‌ಆನ್ ಮತ್ತು ಸುನ್ನತ್ ಕಲಿಸಿ ಕೊಟ್ಟ ರೀತಿಯಲ್ಲಿ ಹಾಗೂ ಅದನ್ನು ಸ್ವಹಾಬಿಗಳು ಅವರ ಜೀವನದಲ್ಲಿ ಅಳವಡಿಸಿದ ರೀತಿಯಲ್ಲಿ ಮಾತ್ರವೇ ನಾವು ಪ್ರವಾದಿ(ﷺ)ರವರನ್ನು ಪ್ರೀತಿಸಬೇಕು. ಅದಕ್ಕೆ ವಿರುದ್ಧವಾದ ರೀತಿಯು ಪ್ರವಾದಿ ಸ್ನೇಹವಲ್ಲ. ಬದಲಾಗಿ ಪ್ರವಾದಿ ನಿಂದನೆಯಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಇಸ್ಲಾಮನ್ನು ಅದರ ಪೂರ್ಣರೂಪದಲ್ಲಿ ಸಮುದಾಯಕ್ಕೆ ನೀಡಿದ ಬಳಿಕವೇ ಇಹಲೋಕ ತ್ಯಜಿಸಿದ್ದಾರೆ. ಇಸ್ಲಾಮಿನ ಪೂರ್ತೀಕರಣದ ಬಗ್ಗೆ ಅಲ್ಲಾಹನೇ ನುಡಿಯುತ್ತಾನೆ:

**﴿الْيَوْمَ أَكْمَلْتُ لَكُمْ دِينَكُمْ وَأَتْمَمْتُ عَلَيْكُمْ نِعْمَتِي وَرَضِيتُ لَكُمُ الإِسْلاَمَ دِينًا﴾**

"…….ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತಿಗೊಳಿಸಿಕೊಟ್ಟಿರುವೆನು. ನನ್ನ ಅನುಗ್ರಹವನ್ನು ನಿಮಗೆ ನಾನು ಪೂರ್ಣಗೊಳಿಸಿಕೊಟ್ಟಿರುವೆನು. ಧರ್ಮವಾಗಿ ಇಸ್ಲಾಮನ್ನು ನಾನು ನಿಮಗೆ ತೃಪ್ತಿಪಟ್ಟು ಕೊಟ್ಟಿರುವೆನು……."(ಸೂರಃ ಅಲ್ ಮಾಇದಃ, 5:3).

ಆದುದರಿಂದ ಅಲ್ಲಾಹನು ತೃಪ್ತಿಪಟ್ಟು ನೀಡಿದ ಅನುಗ್ರಹವಾದ ಇಸ್ಲಾಮಿನಲ್ಲಿ ಏನನ್ನಾದರೂ ಸೇರಿಸಲು ಅಥವಾ ಇಸ್ಲಾಮಿನಿಂದ ಯಾವುದನ್ನಾದರೂ ಕಿತ್ತು ತೆಗೆಯಲು ಯಾರಿಗೂ ಅಧಿಕಾರವಿಲ್ಲ. ನಮ್ಮನ್ನು ಸ್ವರ್ಗದ ಕಡೆಗೆ ನಿಕಟಗೊಳಿಸುವ ಮತ್ತು ನರಕದಿಂದ ದೂರಗೊಳಿಸುವ ಸರ್ವಕಾರ್ಯಗಳನ್ನೂ ಪ್ರವಾದಿ(ﷺ)ರವರು ನಮಗೆ ಕಲಿಸಿಕೊಟ್ಟಿದ್ದಾರೆ. ಹಾಗಿರುವಾಗ ಯಾರಾದರೂ ಹೊಸತಾದ ಧಾರ್ಮಿಕ ಕಾರ್ಯವೊಂದನ್ನು ಪ್ರಾರಂಭಿಸಿದರೆ ಅದನ್ನು ನಾವು ತಳ್ಳಬೇಕು.

ಆಇಶಾ(رضي الله عنها)ರಿಂದ ವರದಿ. ನಬಿ(ﷺ)ರವರು ಹೇಳಿದರು:

**من أحدث في أمرنا ما ليس منه فهو ردٌ (متفق عليه) وفي رواية: من عمل عملا ليس عليه أمرنا فهو ردٌ (مسلم)**

"ನಮ್ಮ ಕಾರ್ಯದಲ್ಲಿ, ಅದರಲ್ಲಿ ಇಲ್ಲದ್ದನ್ನು ಯಾರಾದರೂ ಹೊಸತಾಗಿ ನಿರ್ಮಿಸಿದರೆ ಅದು ತಳ್ಳಬೇಕಾದುದಾಗಿದೆ." (ಮುತ್ತಫಕುನ್ ಅಲಯ್‌ಹಿ). ಇನ್ನೊಂದು ವರದಿಯಲ್ಲಿ: "ನಮ್ಮ ಆದೇಶವಿಲ್ಲದ ಕರ್ಮವನ್ನು ಯಾರಾದರೂ ಅನುಷ್ಠಿಸಿದರೆ ಅದು ತಳ್ಳಬೇಕಾದುದಾಗಿದೆ." (ಮುಸ್ಲಿಮ್).

**<u>ಮೌಲಿದ್ ಆಚರಣೆ ನೂತನವಾದ:</u>** ಮೌಲಿದ್ ಆಚರಣೆಯು ಮೇಲೆ ವಿವರಿಸಲಾದಂತಹ ಬಿದ್‌ಅತ್‌ಗಳಲ್ಲಿ ಸೇರಿದ್ದಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಅವರ ಜನ್ಮ ದಿನವನ್ನು ಆಚರಿಸಲು ನಮಗೆ ಕಲಿಸಲಿಲ್ಲ; ಅವರು ಆಚರಿಸಲೂ ಇಲ್ಲ. ಪ್ರವಾದಿ(ﷺ)ರವರು ಮುಂಚಿನ ಯಾವುದೇ ಪ್ರವಾದಿಗಳ ಜನ್ಮದಿನವನ್ನು ಆಚರಿಸಲಿಲ್ಲ: ಆಚರಿಸಲು ನಮಗೆ ಕಲಿಸಿಯೂ ಇಲ್ಲ. ಪ್ರವಾದಿ(ﷺ)ರನ್ನು ಅತೀ ಹೆಚ್ಚು ಪ್ರೀತಿಸಿದ ಅವರ ಸಹಚರರಾದ ಸ್ವಹಾಬಿಗಳಲ್ಲಿ ಯಾರೂ ಅವರ ಜನ್ಮದಿನವನ್ನು ಆಚರಿಸಲಿಲ್ಲ. ಆ ನಂತರದ ತಲೆಮಾರಿನ ತಾಬಿಉಗಳೂ, ಅವರ ಬಳಿಕದ ತಾಬಿಉ ತಾಬಿಉಗಳೂ ಪ್ರವಾದಿ(ﷺ)ರವರ ಜನ್ಮದಿನವನ್ನು ಕೊಂಡಾಡಲಿಲ್ಲ. ಜನ್ಮದಿನವೆಂದು ಬಾವಿಸಿ ಇತರ ದಿನಗಳ ಆರಾಧನೆಗಳಿಗಿಂತ ಹೆಚ್ಚಾದ ಒಂದು ಆರಾಧನೆಯನ್ನು ಅವರು ಯಾರೂ ಮಾಡಲಿಲ್ಲ. ಜನ್ಮದಿನದ ಭಾಗವಾಗಿ ಒಂದು ತುಂಡು ಖರ್ಜೂರವನ್ನೂ ಸಹ ಅವರು ದಾನ ನೀಡಲಿಲ್ಲ. ಹಾಗಿರುವಾಗ ಪ್ರವಾದಿ(ﷺ)ರವರನ್ನು ಪ್ರೀತಿಸುವವರು ಜನ್ಮದಿನಾಚರಣೆ ಕೊಂಡಾಡಬಾರದು. ಜನ್ಮದಿನ ಆಚರಿಸದೇ ಇರುವುದು ಪ್ರವಾದಿ ಸ್ನೇಹದ ಭಾಗವಾಗಿದೆ. ಮೀಲಾದುನ್ನಬಿ ಆಚರಿಸದೇ ಇರುವವರು(ಸಲಫಿಗಳು) ನೈಜ ಸುನ್ನಿಗಳೂ; ಆಚರಿಸುವವರು(ಕುರಾಫಿ ಸುನ್ನಿಗಳು) ನೂತನವಾದಿಗಳೂ ಆಗಿದ್ದಾರೆ.

ಪ್ರಥಮ ಮೂರು ತಲೆಮಾರಿನ ಮುಅ್‌ಮಿನ್‌ಗಳೇ ಉತ್ತಮರೆಂದು ನಬಿ(ﷺ) ಹೇಳಿದರು. ಇಬ್‌ನು ಮಸ್‌ಊದ್‌ರಿಂದ(ರ) ವರದಿ. ಅಲ್ಲಾಹುವಿನ ಸಂದೇಶವಾಹಕರು(ﷺ) ಹೇಳಿರುವರು: "ಉತ್ತಮ ಜನರು ನನ್ನ ತಲೆಮಾರಿನವರು. ಆ ಮೇಲೆ ಅವರನ್ನು ಹಿಂಬಾಲಿಸುವವರು. ಆ ಮೇಲೆ ಅವರನ್ನು ಹಿಂಬಾಲಿಸುವವರು....." (ಬುಖಾರಿ, ಮುಸ್ಲಿಮ್).

ಈ ಮೂರು ತಲೆಮಾರಿನ ಸಜ್ಜನರು ಯಾರೂ ಮೌಲಿದ್ ಆಚರಿಸಲಿಲ್ಲವೆಂದು ಮೇಲಿನ ವಿವರಣೆಗಳಿಂದ ಸ್ಪಷ್ಟ. ಪ್ರಥಮ ಮೂರು ತಲೆಮಾರಿನಲ್ಲಿ ಮೌಲಿದ್ ಆಚರಣೆ ಇರಲಿಲ್ಲವೆಂದು ಮೌಲಿದ್ ಆಚರಿಸುವವರೇ ಸಮ್ಮತಿಸುತ್ತಾರೆ:

"ಪ್ರವಾದಿ(ﷺ)ರವರ ಉಪದೇಶ ನಿರ್ದೇಶಗಳನ್ನು ಜೀವನದಲ್ಲಿ ಯಥಾಪ್ರತಿ ಅಳವಡಿಸಿದ ಪ್ರಥಮ ಶತಮಾನದವರ ಕಾಲದಲ್ಲಿ ಇಂತಹ ಒಂದು ಜನ್ಮದಿನ ಆಚರಿಸಬೇಕಾದ ಅವಶ್ಯಕತೆ ಇರಲಿಲ್ಲ.........ನಂತರದ ಕಾಲಗಳಲ್ಲಿ ಜನರು ಇಸ್ಲಾಮಿ ರೀತಿಯಿಂದ ದೂರವಾಗುತ್ತಾ ದೀನೀ ವಿಷಯಗಳಲ್ಲಿ ಅಶ್ರದ್ಧರಾದಾಗ ಅವರಿಗೆ ಬೋಧನೆಯ ಅಗತ್ಯವಾಯಿತು. ***<u>ಹಿಜ್‌ರ ನಾಲ್ಕನೇ ಶತಮಾನದಿಂದ ಮುಸ್ಲಿಮ್ ಲೋಕದಲ್ಲಿ ಈ ಸಂಪ್ರದಾಯವು ಜಾರಿಗೆ ಬಂತು</u>***. ಪ್ರಮುಖ ವಿದ್ವಾಂಸರು ಅದಕ್ಕೆ ಅಂಗೀಕಾರ ನೀಡಿದರು. ಈ ವಿಷಯದಲ್ಲಿ ಹಲವಾರು ಗ್ರಂಥಗಳು ರಚಿಸಲ್ಪಟ್ಟಿತು."(ಸುನ್ನೀ ವಾಯ್ಸ್, 1981, ಡಿಸೆಂಬರ್ 8, ಪುಟ 3).

ಅಲ್ ಮವಾಹಿಬುಲ್ ಜಲಿಯ್ಯದಲ್ಲಿ **ತಯವ ಮುಸ್ಲಿಯಾರ್** ಹೇಳುತ್ತಾರೆ: "ಮೌಲಿದ್ ಆಚರಣೆ ಮೊದಲು ಸಂಪ್ರದಾಯವಾಗಿರಲಿಲ್ಲ. ***<u>ಅದು ಹಿಜ್‌ರ ಮುನ್ನೂರರ ಬಳಿಕ ಬಂತು</u>***. ಹೀಗೆ ಸಹಾವಿ ಹೇಳಿದ್ದಾಗಿ ಕಾಣುತ್ತದೆ. ಅದನ್ನು ಹಲಬಿಯ ಒಂದನೇ ಸಂಪುಟದಲ್ಲಿ ನೋಡಬೇಕು."

ಇದು ನಂತರದ ಕಾಲದಲ್ಲಿ ಉಂಟಾದ ಬಿದ್‌ಅತೆಂದು ಇಬ್‌ನು ಹಜರುಲ್ ಹೈತಮಿ(رحمه الله) ಹೇಳಿದ್ದಾರೆಂದು ಸುಯೂಥಿ(رحمه الله) ಹೇಳುವುದನ್ನು ನೋಡಿರಿ:

**اصل المولد بدعة لم تنقل عن احد من السلف الصالح من القرون الثلاثة (الحاوي للفتاوى)**

"ಮೌಲಿದಿನ ಮೂಲವೇ ಬಿದ್‌ಅತ್ ಆಗಿದೆ. ಇದು ಮೂರನೇ ಶತಮಾನದ ವರೆಗಿನ ಸಲಫುಗಳಿಂದ(ಮುಂಗಾಮಿಗಳಿಂದ) ಉದ್ಧರಿಸಲ್ಪಡಲಿಲ್ಲ." (ಅಲ್‌ಹಾವಿ 1/259).

ಇದಕ್ಕೆ ಕುರ್‌ಆನ್ ಮತ್ತು ಸುನ್ನತಿನ ಬೆಂಬಲವಿಲ್ಲವೆಂದು ಇಮಾಮ್ ಫಾಕಿಹಾನಿ ಹೇಳುತ್ತಾರೆ:

**لأ أعلم لهذا المولد أصلا فى كتاب ولاسنّة ولاينقل عمله عن أحد من علماء الأمّة الذين هم قدوة في الدين، المتمسّكون بآثار المتقدّمين بل هو بدعة احدثها البطّالون ، وشهوة نفس إعتنى بها الأكّالون (-الحاوي للفتاوى:١٨٩/١ )**

"ಈ ಮೌಲಿದಿಗೆ ಕುರ್‌ಆನ್ ಮತ್ತು ಸುನ್ನತಿನಲ್ಲಿ ಯಾವ ಪುರಾವೆಯೂ ಇಲ್ಲ. ಧರ್ಮದಲ್ಲಿ ಮಾದರಿಯಾಗಬಹುದಾದ, ಪೂರ್ವಿಕರ ಮಾರ್ಗವನ್ನು ಅವಲಂಬಿಸುವ ಒಬ್ಬ ವಿದ್ವಾಂಸನಿಂದಲೂ ಇದು ಉದ್ಧರಿಸಲ್ಪಡಲಿಲ್ಲ. ಬದಲಾಗಿ ಇದು ಸೋಮಾರಿಗಳು ನಿರ್ಮಿಸಿದ ಬಿದ್‌ಅತ್ ಮತ್ತು ಭೋಜನಪ್ರಿಯರು ಪರಿಗಣಿಸುವ ಒಂದು ದೇಹೇಚ್ಛೆಯೂ ಆಗಿದೆ." (ಅಲ್‌ಹಾವಿ 1/189).

ಮೌಲಿದ್ ಆಚರಣೆ ಬಿದ್‌ಅತ್(ನೂತನವಾದ) ಆಗಿದೆಯೆಂಬುದಕ್ಕೆ ಇನ್ನಾವ ಪುರಾವೆಯೂ ಅಗತ್ಯವಿಲ್ಲ. ಆದುದರಿಂದ ಮನುಷ್ಯರನ್ನೂ ಕಲ್ಲುಗಳನ್ನೂ ಇಂಧನವಾಗಿ ಉರಿಸಲ್ಪಡುವ ನರಕದೆಡೆಗೆ ಕೊಂಡೊಯ್ಯುವ ಬಿದ್‌ಅತಿನಿಂದ ನಾವು ದೂರವಿರೋಣ.

ಇನ್ನು ಮುಸ್ಲಿಯಾರ್‌ಗಳು ಮುಂದಿಡುವ ವಾದ: ಮೌಲಿದ್ ಒಳ್ಳೆಯ ಬಿದ್‌ಅತ್ ಆಗಿದೆ; ಒಳ್ಳೆಯ ಬಿದ್‌ಅತನ್ನು ದೀನಿನಲ್ಲಿ ಸೇರಿಸುವುದು ತಪ್ಪಲ್ಲ. ಈ ವಾದವನ್ನು ನುಚ್ಚುನೂರು ಮಾಡುತ್ತಾ ಇಬ್‌ನು ಉಮರ್(ﷺ)ಹೇಳುತ್ತಾರೆ: **كل بدعة ضلالة وان راها الناس حسنة**

"ಎಲ್ಲಾ ಬಿದ್‌ಅತ್‌ಗಳು ಪಥಭ್ರಷ್ಟತೆ (ದಾರಿ ತಪ್ಪಿದ್ದು) ಆಗಿದೆ. ಜನರಿಗೆ ಎಷ್ಟು ಒಳ್ಳೆಯದಾಗಿ ತೋರಿದರೂ." (ದಾರಿಮಿ).

ಆದುದರಿಂದ ಮೌಲಿದ್ ಎಂಬ ಪುರೋಹಿತರ ಪ್ರಕಾರದ ಒಳ್ಳೆಯ ಕಾರ್ಯವನ್ನು ಪ್ರವಾದಿ(ﷺ)ರವರು ಕಲಿಸಿಕೊಡಲಿಲ್ಲ; ಹಾಗಿರುವಾಗ ನಾವು ಅದನ್ನು ಇಸ್ಲಾಮಿನಲ್ಲಿ ಸೇರಿಸೋಣವೆಂಬ ಕುರಾಫಿಗಳ ವಾದವು ಅಪಾಯಕಾರಿಯಾಗಿದೆ; ಅದು ಪ್ರವಾದಿ ನಿಂದನೆಯಾಗಿದೆ. ಡೆನ್ಮಾರ್ಕಿನ ಪತ್ರಿಕೆಯು ಪ್ರವಾದಿ(ﷺ)ರವರ ಶತ್ರುಗಳೆಂಬ ನೆಲೆಯಲ್ಲಿ ಅವರನ್ನು ನಿಂದಿಸಿದರೆ, ಸುನ್ನಿಗಳೆನ್ನುವ ನೂತನವಾದೀ ಮುಸ್ಲಿಯಾರ್‌ಗಳೂ ಪ್ರವಾದಿ ಸ್ನೇಹದ ಕಪಟ ಮುಖ ಧರಿಸಿ ಅವರನ್ನು ನಿಂದಿಸುತ್ತಾರೆ. ಆದುದರಿಂದ ಯಾರು ಯಹೂದೀ ಏಜಂಟರೆಂಬುದನ್ನು ಮುಸ್ಲಿಮ್ ಸಮುದಾಯವು ಮನವರಿಕೆ ಮಾಡಬೇಕು. ಅಂತಹವರನ್ನು ಬಹಿಷ್ಕರಿಸಲೇ ಬೇಕು.

## ಮೌಲಿದ್ ಕಿತಾಬ್‌ಗಳಲ್ಲಿ ಶಿರ್ಕ್:

ಈ ಬಿದ್‌ಅತ್ ಆದ ಮೌಲಿದ್ ಆಚರಣೆಯ ಭಾಗವಾಗಿ ಸುನ್ನಿಗಳು ಓದುವ ಮೌಲಿದ್ ಗ್ರಂಥಗಳು ಶಿರ್ಕ್, ಬಿದ್‌ಅತ್ ಮತ್ತು ಕಟ್ಟು ಕತೆಗಳಿಂದ ಮಲಿನಗೊಂಡಿದೆ.

ಪ್ರಾರ್ಥನೆ ಅಲ್ಲಾಹನೊಂದಿಗೆ ಮಾತ್ರವೆಂಬುದು ಇಸ್ಲಾಮಿನ ಮೂಲಭೂತ ವಿಶ್ವಾಸಗಳಲ್ಲಿ ಒಂದಾಗಿದೆ. ಪ್ರವಾದಿ(ﷺ)ರವರು ಕಲಿಸಿದರು: الدعاء هو العبادة "ದುಆ (ಪ್ರಾರ್ಥನೆ) ಅದುವೇ ಆಗಿದೆ ಇಬಾದತ್(ಆರಾಧನೆ)." (ತಿರ್ಮಿದಿ). ಆದುದರಿಂದ ಅಲ್ಲಾಹೇತರರೊಂದಿಗೆ ಪ್ರಾರ್ಥಿಸುವುದು ಅಲ್ಲಾಹೇತರರಿಗೆ ಅರ್ಪಿಸುವ ಆರಾಧನೆಯಾಗಿದೆ. ಅದು ಶಿರ್ಕ್ ಆಗಿದೆ.

ಅಲ್ಲಾಹನು ನುಡಿಯುತ್ತಾನೆ:

﴿إِن تَدْعُوهُمْ لَا يَسْمَعُوا دُعَاءكُمْ وَلَوْ سَمِعُوا مَا اسْتَجَابُوا لَكُمْ وَيَوْمَ الْقِيَامَةِ يَكْفُرُونَ بشِرْكِكُمْ﴾

"ನೀವು ಅವರನ್ನು ಕರೆದು ಪ್ರಾರ್ಥಿಸುವುದಾದರೆ ಅವರು ನಿಮ್ಮ ಪ್ರಾರ್ಥನೆಯನ್ನು ಆಲಿಸಲಾರರು. ಒಂದು ವೇಳೆ ಅವರು ನಿಮ್ಮ ಪ್ರಾರ್ಥನೆಯನ್ನು ಆಲಿಸಿದರೆ ಅವರು ನಿಮಗೆ ಉತ್ತರ ನೀಡಲಾರರು. ಮತ್ತು ಖಿಯಾಮತ್ ದಿನದಂದು ನಿಮ್ಮ ಈ 'ಶಿರ್ಕ'ನ್ನು ಅವರು ನಿರಾಕರಿಸಿ ಬಿಡುವರು. ......" (ಸೂರತುಲ್ ಫಾತಿರ್, 35:14).

ಕುರ್‌ಆನ್ ಮತ್ತು ಸುನ್ನತ್ ಪ್ರತಿಪಾದಿಸುವ ಈ ಸುಂದರ ಆಶಯವನ್ನು ಮೌಲಿದ್ ಕಿತಾಬ್‌ಗಳು ತಿರಸ್ಕರಿಸುತ್ತವೆ. ಕೆಲವು ಉದಾಹರಣೆಗಳನ್ನು ನೋಡಿರಿ. ارتكبت على الخطا غير حصر وعدد ، لك أشكو فيه يا سيّدي خبر النبي

"ಪ್ರವಾದಿ ಶಿರೋಮಣಿಯರಲ್ಲಿ ಉತ್ಕೃಷ್ಟರಾದ ನನ್ನ ನಾಥರೇ! ಪಾಪವೆಂಬ ಕುದುರೆಯ ಮೇಲೆ ಹತ್ತಿ ಲೆಕ್ಕವಿಲ್ಲದ ಪಾಪಗಳನ್ನು ನಾನು ಮಾಡಿರುವೆನು. ಆ ಕಾರ್ಯದಲ್ಲಿ ನಾನು ತಮ್ಮಲ್ಲಿ ನನ್ನ ಪರಿತಾಪಕರವಾದ ಅವಸ್ಥೆಯನ್ನು ವ್ಯಕ್ತಪಡಿಸುತ್ತೇನೆ." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 3).

ಮೇಲಿನ ಮೌಲಿದ್ ಗೀತೆಯಲ್ಲಿ ಪ್ರವಾದಿ(ﷺ)ರವರೊಂದಿಗೆ ಪಾಪ ವಿಮೋಚನೆಗಾಗಿ ಪಶ್ಚಾತ್ತಾಪವನ್ನು ಕೇಳಲಾಗುತ್ತದೆ. ಆದರೆ ಪಾಪಗಳನ್ನು ಕ್ಷಮಿಸುವವನು ಅಲ್ಲಾಹನು ಮಾತ್ರವೆಂದೂ, ಅವನಲ್ಲಿ ಮಾತ್ರವೇ ಕ್ಷಮೆ ಯಾಚಿಸಬೇಕೆಂದೂ ಕುರ್‌ಆನ್ ಮತ್ತು ಸುನ್ನತ್ ನಮಗೆ ಕಲಿಸುತ್ತದೆ. ಕುರ್‌ಆನ್ ಕೇಳುತ್ತದೆ:

وَمَن يَغْفِرُ الذُّنُوبَ إِلاَّ اللّهُ ".....ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸಲು ಇನ್ನಾರಿದ್ದಾರೆ..."(ಆಲಿ ಇಮ್ರಾನ್,3:135).

ಮಂಕೂಸ್ ಮೌಲಿದಿನ ಇನ್ನೊಂದು ಗೀತೆ ಹೀಗಿದೆ: الشَفاعة هب لنا في القيامة مشفقا واهً لنا إن ضاع يا سيدي خير النَبي

"ನಬಿ ವರ್ಯರಲ್ಲಿ ಅತ್ಯುತ್ಕೃಷ್ಟರಾದ ನನ್ನ ಯಜಮಾನರೇ! ಅಂತ್ಯ ದಿವಸದಲ್ಲಿ ನಮ್ಮ ಮೇಲೆ ಕನಿಕರಪಟ್ಟು ನಮಗೆ ಶಫಾಅತನ್ನು ದಯಪಾಲಿಸಬೇಕು. ಅದಿಲ್ಲದಿದ್ದರೆ ನಮ್ಮ ದುಃಖ ಹಾ! –ಎಷ್ಟು ಭಯಂಕರ." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 3).

ಪ್ರವಾದಿ(ﷺ)ರವರು ಸತ್ಯವಿಶ್ವಾಸಿಗಳಿಗೆ ಪರಲೋಕದಲ್ಲಿ ಶಫಾಅತ್ ಮಾಡುವರೆಂಬುದು ಸತ್ಯವಾಗಿದೆ. ಅದು ಕುರ್‌ಆನ್ ಮತ್ತು ಸುನ್ನತಿನಿಂದ ಸ್ಪಷ್ಟಗೊಂಡ ಕಾರಣ ಸಲಫಿಗಳು ಅದನ್ನು ಅಂಗೀಕರಿಸುತ್ತಾರೆ. ಆದರೆ ಆ ಶಫಾತನ್ನು ನಮಗೆ ದಯಪಾಲಿಸಲು ನಾವು ಅಲ್ಲಾಹನಲ್ಲಿ ಮಾತ್ರ ಪ್ರಾರ್ಥಿಸಬೇಕು. ಯಾಕೆಂದರೆ ಪ್ರಾರ್ಥನೆ ಆರಾಧನೆಯಾಗಿದೆ.

ಅಲ್ಲಾಹೇತರರೊಂದಿಗೆ ಪ್ರಾರ್ಥಿಸುವ ಇಂತಹ ಹಲವು ಗೀತೆಗಳನ್ನು ಮೌಲಿದ್ ಕಿತಾಬ್‌ಗಳಲ್ಲಿ ಕಾಣಬಹುದು. ಅಲ್ಲಾಹೇತರರೊಂದಿಗೆ ಪ್ರಾರ್ಥಿಸುವವರನ್ನು ಅತಿಯಾಗಿ ದಾರಿ ಕೆಟ್ಟವರೆಂದು ಕುರ್‌ಆನ್ ಕರೆದಿದೆ.

﴿وَمَنْ أَضَلُّ مِمَّن يَدْعُو مِن دُونِ اللَّهِ مَن لَّا يَسْتَجِيبُ لَهُ إِلَى يَومِ الْقِيَامَةِ وَهُمْ عَن دُعَائِهِمْ غَافِلُونَ﴾

"ಖಿಯಾಮತ್ ದಿನದವರೆಗೂ ಉತ್ತರ ನೀಡದವರನ್ನು ಕರೆದು ಪ್ರಾರ್ಥಿಸುವವರಿಗಿಂತ ಅತಿಯಾಗಿ ದಾರಿ ಕೆಟ್ಟವರು ಯಾರು ? ಅವರಾದರೋ ಇವರ ಪ್ರಾರ್ಥನೆಯ ಬಗ್ಗೆ ಅಶ್ರದ್ಧರಾಗಿರುವರು." (ಸೂರಃ ಅಹ್‌ಖಾಫ್, 46:5).

ಕುರ್‌ಆನಿಗೆ ವಿರುದ್ಧವಾದ ಇಂತಹ ಪ್ರಾರ್ಥನೆಗಳನ್ನು ಪುರೋಹಿತರು ಸಮರ್ಥಿಸುವ ರೀತಿಯನ್ನು ನೋಡಿರಿ:

"ಪ್ರಶ್ನೆ: 'ಮುಹ್‌ಯಿದ್ದೀನ್ ಶೈಖ್‌ರವರೇ ನನ್ನ ಪಾಪ ಮನ್ನಿಸಿ' ಎಂಬ ಇಸ್ತಿಗಾಸ ಸಮ್ಮತಾರ್ಹವೇ ? ಹೌದಾದಲ್ಲಿ ಓ ಅಲ್ಲಾಹ್ ನನ್ನ ಪಾಪ ಮನ್ನಿಸು ಎಂಬ ಇಸ್ತಿಗಾಸರಹಿತ ಪ್ರಾರ್ಥನೆ ಉತ್ತಮವೇ ?

ಉತ್ತರ: ಸಮ್ಮತಾರ್ಹವಾಗಿದೆ. ಕಾರಣವೇನೆಂದರೆ, ಒಬ್ಬ ಮುಸ್ಲಿಮನು 'ಮುಹ್‌ಯಿದ್ದೀನ್ ಶೈಖ್‌ರವರೇ ನನ್ನ ಪಾಪ ಮನ್ನಿಸಿ' ಎಂದು ಯಾಚಿಸಿದರೆ, ರೋಗ ಗುಣಪಡಿಸುವಾತ ಅಲ್ಲಾಹನಾಗಿರುವನೆಂಬ ನಂಬಿಕೆಯಲ್ಲಿ 'ನನ್ನ ರೋಗ ಶಮನಗೊಳಿಸಿ' ಎಂದು ವೈದ್ಯರಲ್ಲಿ ಮೊರೆಯಿಡುವ ಮುಅ್‌ಮಿನ್‌ಗೆ ಸಮಾನವಾಗಿದೆ.. .. .. ..ಮನಃಶಾಂತಿ ಮತ್ತು ಪಾಪ ಮನ್ನಿಸುವುದೆಂಬ ಶುಭ ನಿರೀಕ್ಷೆಯು ಇಸ್ತಿಗಾಸದ ಮೂಲಕವೇ ಕೆಲವರಿಗೆ ಸಿಗುವಂತಿದ್ದರೆ ಅವರಿಗೆ ಇಸ್ತಿಗಾಸವೇ ಉತ್ತಮ.........]" (ಫತಾವಾ ಮುಹ್ಯಿಸ್ಸುನ್ನಃ, ಪೊನ್ಮಳ ಅಬ್ದುಲ್ ಖಾದಿರ್ ಮುಸ್ಲಿಯಾರ್, ಪುಟ,70–72).

ಮುಹ್ಯುದ್ದೀನ್ ಶೈಖ್‌ರವರೊಡನೆ ಪ್ರಾರ್ಥಿಸುವಾಗ ಮನಶಾಂತಿ ಲಭಿಸುವುದಾದರೆ ಅದುವೇ ಅಲ್ಲಾಹನೊಡನೆ ಪ್ರಾರ್ಥಿಸುವುದಕ್ಕಿಂತ ಉತ್ತಮವೆಂದಲ್ಲವೇ ಮೇಲಿನ ಫತ್ವಾದ ಸಾರಾಂಶ. ಹಾಗಾದರೆ ಮನಶಾಂತಿ ಪಡೆಯುತ್ತಾ ಯಾರಾದರೂ ಶ್ರೀರಾಮನೊಂದಿಗೂ, ಈಸಾ(ﷺ) (ಏಸು ಕ್ರಿಸ್ತು) ರವರೊಂದಿಗೂ ಪ್ರಾರ್ಥಿಸಿದರೂ ಶಿರ್ಕ್ ಆಗದೇ ?

**ಪ್ರವಾದಿಗಳು ಮೌಲಿದ್ ಕಿತಾಬಿಗೆ ವಿರುದ್ಧ:** ಪ್ರವಾದಿಗಳು ರಸೂಲ್(ﷺ)ರವರಲ್ಲಿ ಪ್ರಾರ್ಥಿಸಿದರೆಂದೂ, ರಸೂಲ್(ﷺ)ರವರನ್ನು ತವಸ್ಸುಲ್ ಮಾಡಿ ಪ್ರವಾದಿಗಳು ಪ್ರಾರ್ಥಿಸಿದರೆಂದೂ ಕಟ್ಟುಕತೆಯನ್ನು ನಿರ್ಮಿಸಿ ಮೌಲಿದ್ ಕಿತಾಬ್‌ಗಳ ಮೂಲಕ ಪುರೋಹಿತರು ಪ್ರಚಾರ ಪಡಿಸುತ್ತಾರೆ. ಕೆಲವು ಉದಾಹರಣೆಗಳನ್ನು ನೋಡಿರಿ:

" ತಿಳಿಯಿರಿ! ಹಝ್ರತ್ ಆದಮ್(عليه السلام)ರು ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರನ್ನು ತವಸ್ಸುಲ್(ಮಧ್ಯವರ್ತಿಯನ್ನಾಗಿ) ಮಾಡಿ ಅಲ್ಲಾಹುವಿನಲ್ಲಿ ಪ್ರಾರ್ಥಿಸಿರುವರು." (ಮಂಕೂಸ್ ಮೌಲಿದ್ ಕನ್ನಡ ಬಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 1).

ಆದರೆ ಹಝ್ರತ್ ಆದಮ್(عليه السلام)ರವರು ನೇರವಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿದರೆಂದು ಕುರ್‌ಆನ್ ನಮಗೆ ಕಲಿಸುತ್ತದೆ. ಆದಮ್ ನಬಿ(عليه السلام)ರವರ ಪ್ರಾರ್ಥನೆ ಕುರ್‌ಆನಿನಲ್ಲಿ ಹೀಗಿದೆ:

﴿قَالاَ رَبَّنَا ظَلَمْنَا أَنفُسَنَا وَإِن لَّمْ تَغْفِرْ لَنَا وَتَرْحَمْنَا لَنَكُونَنَّ مِنَ الْخَاسِرِينَ﴾

"ಅವರು ಇಬ್ಬರೂ ಹೇಳಿದರು: ನಮ್ಮ ಪ್ರಭೂ, ನಾವು ನಮ್ಮೊಂದಿಗೆನೇ ಅಕ್ರಮ ಎಸಗಿದ್ದೇವೆ. ನೀನು ನಮಗೆ ಕ್ಷಮೆ ನೀಡಿ, ನಮ್ಮೊಂದಿಗೆ ಕರುಣೆ ತೋರದಿದ್ದರೆ, ಖಂಡಿತವಾಗಿಯೂ ನಾವು ನಷ್ಟಹೊಂದಿದವರ ಸಂಗಡವಾಗುವೆವು."(ಸೂರಃ ಅಲ್‌ಅರಾಫ್, 7:23).

ಇನ್ನೊಂದು ಸುಳ್ಳನ್ನು ನೋಡಿರಿ: "ಆ ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರಲ್ಲಿ ಹಝ್ರತ್ ನೂಹ್ ನಬಿಯವರು ಇಸ್ತಿಗಾಸ (ಖುದ್ದು ಸಹಾಯಾಭ್ಯರ್ಥನೆ) ಮಾಡಿದರು. ಹಾಗೂ ಅವರು ವಿನಾಶದಿಂದ ರಕ್ಷೆ ಪಟ್ಟರು." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 1).

ಆದರೆ ನೂಹ್ ನಬಿ(عليه السلام)ಯವರು ಅಲ್ಲಾಹನಲ್ಲಿ ಪ್ರಾರ್ಥಿಸಿದರೆಂದೂ, ಅಲ್ಲಾಹನು ಅವರನ್ನು ರಕ್ಷಿಸಿದನೆಂದೂ ಕುರ್‌ಆನ್ ಹೇಳುತ್ತದೆ:

﴿وَلَقَدْ نَادَانَا نُوحٌ فَلَنِعْمَ الْمُجِيبُونَ* وَنَجَّيْنَاهُ وَأَهْلَهُ مِنَ الْكَرْبِ الْعَظِيمِ﴾

"ನೂಹ್ ನಮ್ಮನ್ನು ಕರೆದರು. ಆಗ ಉತ್ತರ ನೀಡಿದವನು ಎಷ್ಟು ಉತ್ತಮನು. ಅವರನ್ನೂ ಅವರ ಜನರನ್ನೂ ನಾವು ಮಹಾ ದುರಂತದಿಂದ ರಕ್ಷಿಸಿದೆವು." (ಸೂರತು ಸ್ವಾಫಾತ್, 37:76).

ಇಬ್‌ರಾಹೀಮ್ ನಬಿ(عليه السلام)ಯರವರ ಹೆಸರಲ್ಲಿ ಮಂಕೂಸ್ ಮೌಲಿದಿನಲ್ಲಿ ಇರುವ ಕಟ್ಟು ಕತೆಯೊಂದು ಹೀಗಿದೆ: "ಹಝ್ರತ್ ಇಬ್ರಾಹೀಂ ನಬಿ(عليه السلام)ಯವರು ಅಗ್ನಿಯಲ್ಲಿ ಎಸೆಯಲ್ಪಟ್ಟಾಗ ತನ್ನ ಬೆನ್ನಿನಲ್ಲಿ ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರು (ಪ್ರಕಾಶ ರೂಪದಲ್ಲಿ) ಇದ್ದ ಕಾರಣ ಆ ಅಗ್ನಿ ನಂದಿ ಹೋಯಿತು." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 1).

ಆದರೆ ಕುರ್‌ಆನ್ ಹೇಳುತ್ತದೆ: ﴿قُلْنَا يَا نَارُ كُونِي بَرْدًا وَسَلَامًا عَلَى إِبْرَاهِيمَ﴾

"ನಾವು(ಅಲ್ಲಾಹು) ಹೇಳಿದೆವು: ಓ ಅಗ್ನಿಯೇ, ತಣ್ಣಗಾಗಿ ಬಿಡು ಮತ್ತು ಇಬ್‌ರಾಹೀಮ್‌ರ ಪಾಲಿಗೆ ಸುರಕ್ಷೆಯಾಗು." (ಸೂರತುಲ್ ಅಂಬಿಯಾ, 21:69).

ಮಂಕೂಸ್ ಮತ್ತು ಇತರ ಮೌಲಿದ್‌ಗಳಲ್ಲಿ ಪ್ರವಾದಿಗಳ ಹೆಸರಲ್ಲೇ ಇಂತಹ ಸುಳ್ಳುಗಳು ಇರುವುದರಿಂದ ಮೌಲಿದ್ ಗ್ರಂಥಗಳು ಪ್ರವಾದಿಗಳಿಗೇ ವಿರುದ್ಧವಾಗಿದೆ. ಪ್ರವಾದಿಗಳಿಗೆ ವಿರುದ್ಧವಿರುವ ಚರಿತ್ರೆಯನ್ನು ಸ್ವೀಕರಿಸುವುದು ಸತ್ಯವಿಶ್ವಾಸಿಗಳಿಗೆ ಭೂಷಣವಲ್ಲ. ಅದು ಯಹೂದಿಗಳ ಲಕ್ಷಣವಾಗಿದೆ.

**ಮೌಲಿದ್ ಕಿತಾಬಿನಲ್ಲಿರುವ ಇನ್ನಿತರ ಕೆಲವು ಕಟ್ಟುಕಥೆಗಳು:**

ಪ್ರವಾದಿ ಮುಹಮ್ಮದ್(ﷺ)ರವರ ಹೆಸರಲ್ಲಿ ಸುಳ್ಳನ್ನು ನಿರ್ಮಿಸಿ ಅವರನ್ನು ಪ್ರೀತಿಸಬೇಕಾದುದಲ್ಲ. ಬದಲಾಗಿ, ಪ್ರವಾದಿ(ﷺ)ರವರ ಹೆಸರಲ್ಲಿ ಸತ್ಯವನ್ನು ಮಾತ್ರ ಹೇಳಿ ಅವರನ್ನು ಪ್ರೀತಿಸಬೇಕು. ಅದುವೇ ನೈಜ ಪ್ರವಾದಿ ಸ್ನೇಹ. ಆದರೆ ಪ್ರವಾದಿಸ್ನೇಹದ ಹೆಸರಲ್ಲಿ ಮುಸ್ಲಿಯಾರ್‌ಗಳು ಜನರಿಂದ ಓದಿಸಿ, ಸ್ವಯಂ ಓದಿ ಹೊಟ್ಟೆ ಮತ್ತು ಜೇಬು ತುಂಬಿಸುವ ಮೌಲಿದ್‌ಗಳಲ್ಲಿ ಪ್ರವಾದಿಗಳ ಹೆಸರಲ್ಲಿ ಹಲವು ಕಟ್ಟು ಕತೆಗಳು ಇವೆ. ಒಂದೆರಡು ಉದಾಹರಣೆಗಳನ್ನು ನೋಡಿರಿ:

"ಅವನು ಸಮಸ್ತ ಲೋಕವನ್ನು ಸೃಷ್ಟಿಸುವುದಕ್ಕೆ ಮುಂಚೆಯೇ ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರ ಪ್ರಕಾಶವನ್ನು ಸೃಷ್ಟಿಸಿ ಅದಕ್ಕೆ ಮುಹಮ್ಮದ್ ಎಂದು ನಾಮಕರಣ ಮಾಡಿರುವನು." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 1).

"ನಬಿ(ﷺ)ಯವರಿಂದ ನಿವೇದನೆ ಮಾಡಲ್ಪಟ್ಟಿದೆ: ನಾನು ಪರಿಶುದ್ಧನಾದ ಅಲ್ಲಾಹುವಿನ ಸನ್ನಿಧಿಯಲ್ಲಿ ಆದಮ್ ನಬಿ(عليه السلام)ಯವರನ್ನು ಸೃಷ್ಟಿಸುವುದಕ್ಕಿಂತ ಎರಡು ಸಾವಿರ ವರ್ಷಗಳ ಮುಂಚೆಯೇ ಒಂದು ಪ್ರಕಾಶವಾಗಿದ್ದೆ." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 2).

ಮಾನವರಲ್ಲಿ ಅಲ್ಲಾಹನು ಪ್ರಥಮವಾಗಿ ಸೃಷ್ಟಿಸಿರುವುದು ಆದಮ್(عليه السلام) ರವರನ್ನು ಎಂಬ ಸರ್ವಾಂಗೀಕೃತವಾದ ಇಸ್ಲಾಮಿನ ತತ್ವಕ್ಕೇ ಇದು ವಿರುದ್ಧವಾಗಿದೆ.

ಪ್ರವಾದಿ ಮುಹಮ್ಮದ್(ﷺ)ರವರ ತಾಯಿ ಆಮೀನಾರ ಬಳಿ ಮಲಕ್‌ಗಳೂ, ಪ್ರವಾದಿಗಳೂ ಬಂದರೆಂಬ ಹಸಿ ಹಸಿ ಸುಳ್ಳನ್ನು ಯಾವುದೇ ಲಜ್ಜೆಯಿಲ್ಲದೇ ಪುರೋಹಿತರು ಮಂಕೂಸ್ ಮೌಲಿದ್‌ನಲ್ಲಿ ತುರುಕಿದ್ದಾರೆ. ಅದು ಹೀಗಿದೆ:

"ನೀನು ಆಗ್ರಹಿಸುವಂತಹ ಆಗ್ರಹದ ಪೂರ್ಣತೆಯನ್ನು ಪ್ರಾಪ್ತಿಸಿರುವೆ ಎಂಬ ಮಲಕುಗಳ ಸಂತೋಷ ವಾರ್ತೆಯನ್ನು ಶವ್ವಾಲ್ ತಿಂಗಳಲ್ಲಿ ಆಮಿನಾ ಬೀಬಿ ಆಲಿಸಿದರು. ಉನ್ನತ– ಗೌರವ ಮತ್ತು ಪ್ರಕಾಶವುಳ್ಳ ಆ ಪುಣ್ಯ ಶಿಶು ನಿಮಿತ್ತ ನೀವು ಸಂತುಷ್ಟರಾಗಿರಿ ಎಂಬ ದಿವ್ಯ ವಾಣಿ ತಿಳಿಸಲಿಕ್ಕೆ ಬಂದ ಖಲೀಲ್ ಆದ ಇಬ್ರಾಹೀಮ್ ನಬಿ (ﷺ)ಯವರನ್ನು ಝುಲ್‌ಖಅದ್ ತಿಂಗಳಲ್ಲಿ ಬೀಬಿ ಕಂಡಿದ್ದರು. ಮುಹಮ್ಮದ್ ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರ ಬಹುಮಾನ್ಯತೆ ಮತ್ತು ಉನ್ನತ ಸ್ಥಾನಗಳ ಕುರಿತುಳ್ಳ ಸಂತೋಷ ಸುದ್ದಿಯನ್ನು ತಿಳಿಸಲು ದ್ಸುಲ್ ಹಜ್ಜ್ ತಿಂಗಳಲ್ಲಿ ಕಲೀಮಾದ ಮೂಸಾ ನಬಿ(ﷺ)ಯವರು ಬಂದಿದ್ದರು. ಮುಹರ್ರಮ್ ತಿಂಗಳಲ್ಲಿ ಜಿಬ್ರೀಲ್(ﷺ) ಬಂದು ಶುಭ ಪ್ರಸವದ ಸಮಯ ನಿಶ್ಚಯವಾಗಿ ಆಸನ್ನವಾಗಿದೆಯೆಂಬ ಸಂತೋಷ ವಾರ್ತೆಯನ್ನು ಬೀಬಿಗೆ ತಿಳಿಸಿದರು." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 4).

ಈ ಕತೆಗಳಿಗೆ ಯಾವುದೇ ಆಧಾರವಿಲ್ಲ. ಇವುಗಳಿಗೆ ಸಹೀಹ್ ಆದ ಸನದ್ ಮೂಲಕವಿರುವ ಯಾವುದೇ ಹದೀಸ್‌ಗಳಿಲ್ಲ. ಇವುಗಳು ಕೇವಲ ಕಟ್ಟು ಕತೆಗಳಾಗಿವೆ. ಪ್ರವಾದಿ(ﷺ)ರವರ ಹೆಸರಲ್ಲಿ ಯಾರಾದರೂ ಸುಳ್ಳನ್ನು ಹೇಳಿದರೆ ಅವನ ಸ್ಥಾನ ನರಕವೆಂದು ಪ್ರವಾದಿ(ﷺ)ರವರೇ ಹೇಳಿದ್ದಾರೆ. ಆದುದರಿಂದ ಕಟ್ಟುಕತೆಗಳಿಂದ ವಿರಮಿಸಿ, ಸತ್ಯಯದೆಡೆಗೆ ಮರಳಿರಿ.

## ಮುಶ್ರಿಕರು ವಿಗ್ರಹದೊಂದಿಗೆ ಪ್ರಾರ್ಥಿಸುತ್ತಾ ಹಾಡಿದ ಶೋಕ ಗೀತೆಯೂ ಮೌಲಿದ್ ಕಿತಾಬಿನಲ್ಲಿ:

ಮಂಕೂಸ್ ಮೌಲಿದ್ ಹೀಗೆನ್ನುತ್ತದೆ: "ಈ ರೀತಿ ಹೇಳಲ್ಪಟ್ಟಿದೆ: ಎರಡು ಸಾವಿರ ವರ್ಷಗಳಿಗಿಂತ ಮುಂಚೆಯೇ ಒಂದು ಸಮಯದಲ್ಲಿ ನಂದಿ ಹೋಗದ ಪರ್ಶಿಯಾ ದೇಶದವರ ಬೆಂಕಿಯ ಜ್ವಾಲೆಗಳು ನಬಿ(ಸಲ್ಲಲ್ಲಾಹು ಅಲೈಹಿ ವಸಲ್ಲಂ)ಯವರ ಜನನವಾದ ಅದೇ ರಾತ್ರಿ ತಾನಾಗಿಯೇ ನಂದಿ ಹೋದವು. ಕಿಸ್ರಾ ಚಕ್ರವರ್ತಿಯ ಕೋಟೆಗಳು ಒಡೆದು ನುಚ್ಚು ನೂರಾದವು. ಅದರಿಂದ ಹದಿನಾಲ್ಕು ಗೋಪುರಗಳು ನೆಲ ಕಚ್ಚಿದವು. ಸಾವ ತಟಾಕದ ನೀರು ತನ್ನಷ್ಟಕ್ಕೆ ಬತ್ತಿ ಹೋದವು. ಲೋಕದಲ್ಲಿರುವ ಎಲ್ಲಾ ಪ್ರತಿಮೆಗಳು ತಲೆಕೆಳಗಾಗಿ ನೆಲಕ್ಕೆ ಉರುಳಿಸಲ್ಪಟ್ಟವು..." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 7).

ಈ ಕಟ್ಟು ಕತೆಗೆ ಮುಸ್ಲಿಯಾರ್‌ಗಳ ಲೇಖನಿ ಮತ್ತು ನಾಲಗೆಯ ಹೊರತು ಸ್ವಹೀಹ್ ಆದ ಯಾವುದೇ ಪುರಾವೆ ಇಲ್ಲ. ನುಬುವ್ವತ್ ಎಂಬ ಅನುಗ್ರಹದ ಮೂಲಕ ಸರ್ವಲೋಕಗಳಿಗೆ ಅನುಗ್ರಹವಾಗಿ ಅಲ್ಲಾಹನು ನಿಯೋಗಿಸಿದ ಪ್ರವಾದಿವರ್ಯರ ಜನನದಿಂದ ಕಿಸ್ರಾ ಚಕ್ರವರ್ತಿಯ ಕೋಟೆ ಒಡೆಯಿತೆಂದಾಗಲೀ, ಒಂದು ಹನಿ ನೀರಾದರೂ ಬತ್ತಿತೆಂದಾಗಲೀ ವಿಶ್ವಾಸವಿಡಲು ಕುರಾಫಿಗಳಿಗೇ ಹೊರತು, ಪ್ರವಾದಿ ಸ್ನೇಹಿಗಳಾದ ಮುಸ್ಲಿಮರಿಗೆ ಅಸಾಧ್ಯ. ಇದು ಪ್ರವಾದಿ ನಿಂದನೆಯೇ ಹೊರತು ಪ್ರವಾದಿ ಸ್ನೇಹವಲ್ಲ.

ಆ ಬಳಿಕ ಮೇಲಿನ ಕತೆ ಹೀಗೆ ಮುಂದುವರಿಯುತ್ತದೆ: ".. .. .. .. ಆಗ ಅವರಲ್ಲೊಬ್ಬನಾದ ಉಸ್ಮಾನ್ ಬಿನ್ ಹುವೈರಿಸ್ ಎಂಬವರು ಆ ವಿಗ್ರಹಕ್ಕೆ ಅಭಿಮುಖವಾಗಿ ನಿಂತು, ಇದಕ್ಕೇನಾಗಿದೆ ? ಇದು ಯಾವ ಕಾರಣ ಎಲ್ಲಾ ಸಲವೂ ತಲೆ ಕೆಳಗೆ ಮಾಡಿ ಬಿದ್ದದ್ದು? ಖಂಡಿತವಾಗಿ ಇದು ಈಗ ಸಂಭವಿಸಿದ ಆ ಹೊಸ ಕಾರಣದಿಂದ ಉಂಟಾದದ್ದಾಗಿದೆ ಎಂದು ಹೇಳಿ ಅವರು ಶೋಕಗೀತೆ ಹಾಡಲಿಕ್ಕೆ ಶುರು ಮಾಡಿದರು.. .. .. .. .. ಈ ಹಬ್ಬದ ಸುದಿನದಲ್ಲಿ ಸಮೀಪ ಮತ್ತು ದೂರವುಳ್ಳ ಯೋಗ್ಯಸ್ಥರು ಬಂದು ಸುತ್ತ ಮುತ್ತಲಲ್ಲಿ ಕೂಟ ಕೂಟವಾಗಿ ನಿಂತು ಭಜನೆ ಮಾಡಲ್ಪಡುವ ಮೂರ್ತಿಯೇ !.. .. .... .. .. .. ನೀನು ತಲೆ ಕೆಳಗಾಗಿ ಬಿದ್ದದ್ದು ನಾವು ಮಾಡಿದ ಪಾಪ ಕಾರಣದಿಂದಾದರೆ ಅದನ್ನು ಸಮ್ಮತಿಸಿಕೊಂಡು ಪಶ್ಚಾತ್ತಾಪಿಸುತ್ತೇವೆ.. .. .. .." (ಮಂಕೂಸ್ ಮೌಲಿದ್ ಕನ್ನಡ ಭಾಷಾಂತರ, ಅಲ್ ಅನ್ಸಾರ್ ಮೀಲಾದ್ ಗಿಫ್ಟ್ 1998, ಪುಟ 7–8). ಆ ಬಳಿಕ ವಿಗ್ರಹದ ಒಳಭಾಗದಿಂದ ಮೂರು ಕವಿತೆಗಳು ಕೇಳಿಸಲ್ಪಟ್ಟಿತೆಂದೂ ಮಂಕೂಸ್ ಮೌಲಿದಿನಲ್ಲೇ ಇದೆ.

ಆ ಮುಶ್ರಿಕರು ಹಾಡಿದ ಶಿರ್ಕ್‌ನ ಗೀತೆಯನ್ನು, ಮುಸ್ಲಿಮ್ ಸಮುದಾಯದ ಅನ್ನವನ್ನು ಉಂಡು ಬೆಳೆಯುತ್ತಿರುವ ಮುಸ್ಲಿಯಾರ್‌ಗಳು, ಮುಸ್ಲಿಮರ ಮೂಲಕವೇ ಹಾಡಿಸುತ್ತಾ ಜನರ ಜೇಬನ್ನೂ, ಈಮಾನನ್ನೂ ಕೊಳ್ಳೆ ಹೊಡೆಯುತ್ತಿದ್ದಾರೆ. ಸತ್ಯವಿಶ್ವಾಸಿಗಳೇ, ಮುಸ್ಲಿಯಾರ್‌ಗಳನ್ನು ಅಂಧವಾಗಿ ಅನುಸರಿಸುವುದನ್ನು ಕೈ ಬಿಟ್ಟು ಕುರ್‌ಆನ್ ಮತ್ತು ಸುನ್ನತಿನ ಪ್ರಕಾಶದೆಡೆಗೆ ಮರಳಿರಿ. ಪರಲೋಕದಲ್ಲಿ ರಕ್ಷೆ ಹೊಂದಬಹುದು.

## ಕುರ್‌ಆನ್ ಸ್ವಯಂ ಮೌಲಿದ್ ಓದಿದೆಯಂತೆ:

ಮೂರು ಶತಮಾನಗಳ ಬಳಿಕ ಮೌಲಿದ್ ಆಚರಣೆ ಪ್ರಾರಂಭವಾಯಿತೆನ್ನುವ ಕುರಾಫಿಗಳೇ ಹೇಳುತ್ತಾರೆ: "ಅಲ್ಲದೆ ಪೂರ್ವಕಾಲದ ಪ್ರವಾದಿ ದಾವೂದ್(عليه السلام), ಇಬ್‌ರಾಹೀಮ್(عليه السلام), ಇಸ್ಮಾಈಲ್(عليه السلام), ಇದ್ರೀಸ್(عليه السلام) ಮುಂತಾದ ಪ್ರವಾದಿ ಮಹದ್ಮಣಿಗಳನ್ನು ಸ್ಮರಿಸಿರಿ (ಉದ್ಸ್‌ಕುರ್) ಎಂದು ಪ್ರಾರಂಭಿಸಿ ಅವರ ಗುಣ ಮಹಾತ್ಮೆಗಳನ್ನು ಕುರ್‌ಆನ್ ಬಣ್ಣಿಸಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕುರ್‌ಆನ್ ಪೂರ್ವ ಮಹಾತ್ಮರುಗಳ 'ಮೌಲಿದ್'ಗಳನ್ನು ಓದುವಂತೆ ನಮಗೆ ಆದೇಶಕೊಟ್ಟು ಸ್ವತಃ ಓದಿದೆ (ಅಲ್ ಅನ್ಸಾರ್, ಅಗೋಸ್ತು, 16–29, 1994).

ಪ್ರವಾದಿಗಳ ಜನ್ಮ ದಿನ ನೋಡಿ ಅವರನ್ನು ಸ್ಮರಿಸಲು ಮತ್ತು ಹೊಗಳಲು ಆದೇಶವಿತ್ತ ಕುರ್‌ಆನಿನ ಸೂಕ್ತವನ್ನು ತೋರಿಸಿಕೊಡಲು ಪುರೋಹಿತ ಮುಸ್ಲಿಯಾರ್‌ಗಳಿಗೆ ಸಾಧ್ಯವೇ ? ಕುರ್‌ಆನ್ ಮೌಲಿದ್ ಓದಲು ಆದೇಶವಿತ್ತ ಮತ್ತು ಸ್ವತಃ ಮೌಲಿದ್

ಓದಿದ ಸೂಕ್ತ ಯಾವುದೆಂದು ತೋರಿಸಿ ಕೊಡಲು ಸರ್ವ ಮುಸ್ಲಿಯಾರ್‌ಗಳಿಗೂ ಪಂಥಾಹ್ವಾನ ನೀಡುತ್ತೇವೆ. ಇನ್ ಶಾ ಅಲ್ಲಾಹ್, ಅಂತ್ಯ ದಿನದ ವರೆಗೂ ನಿಮಗೆ ಅದು ಅಸಾಧ್ಯ.

## ಮಂಕೂಸ್ ಮೌಲಿದ್ ಕೇರಳ ಮತ್ತು ಕರ್ನಾಟಕದಲ್ಲಿ ಮಾತ್ರ :

ಕುರ್‌ಆನ್ ಮತ್ತು ಸುನ್ನತ್ ಕಲಿಸಿದ ದ್ಸಿಕ್ರ್, ದುಆ ಇತ್ಯಾದಿಗಳೆಲ್ಲವೂ ಲೋಕಾದಾದ್ಯಂತವಿರುವ ಮುಸ್ಲಿಮರಿಗೆ ಅಂತಿಮ ದಿನದ ವರೆಗೂ ಒಂದೇ ಆಗಿದೆ. ಉದಾ: ನಮಾಝಿನ ದುಆ, ಮಲಗುವಾಗ ಹೇಳುವ ದುಆ ಇತ್ಯಾದಿ ಸರ್ವವನ್ನೂ ಪ್ರವಾದಿ(ﷺ) ಕಲಿಸಿದ್ದಾರೆ. ಅವುಗಳೆಲ್ಲವೂ ದೇಶ–ಭಾಷೆಯ ವ್ಯತ್ಯಾಸವಿಲ್ಲದೇ ಎಲ್ಲ ಕಡೆಯೂ ಒಂದೇ ಆಗಿದೆ; ವ್ಯತ್ಯಸ್ಥವಲ್ಲ. ಆದರೆ ಪ್ರವಾದಿ ಪ್ರೇಮದ ಹೆಸರಲ್ಲಿ ನಮ್ಮೂರಲ್ಲಿ ಪ್ರಚಲಿತವಿರುವ ಮಂಕೂಸ್ ಮೌಲಿದ್ ಕೇವಲ ಕೇರಳ ಮತ್ತು ಕರ್ನಾಟದಲ್ಲಿ ಮಾತ್ರ ಇರುವುದೆಂದು ಅದರ ಪ್ರಚಾರಕರೇ ಬರೆಯುವುದನ್ನು ನೋಡಿರಿ:

"ಮೌಲಿದ್‌ನಲ್ಲಿ ಅದರಲ್ಲೂ ಮುಖ್ಯವಾಗಿ ಈಗ ***<u>ಕೇರಳ ಮತ್ತು ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಮಂಕೂಸ್ ಮೌಲಿದ್‌ನಲ್ಲಿ</u>*** ನೂತನವಾದಿಗಳೆನ್ನುವಂತೆ ಶಿರ್ಕ್ ಅಥವಾ ಬಿದ್‌ಅತ್‌ನ ಅಂಶಗಳಿಲ್ಲ." (ಅಲ್ ಅನ್ಸಾರ್, ಆಗಸ್ಟ್ 15–28, 1995, ಪುಟ 63).

ಶಿರ್ಕ್ ತುಂಬಿದ ಮಂಕೂಸ್ ಮೌಲಿದಿನಲ್ಲಿ ಶಿರ್ಕ್ ಇಲ್ಲವೆಂದು ಸುಳ್ಳು ಹೇಳುವಾಗ ಇನ್ನೊಂದು ಸತ್ಯ ಹೊರಬಿತ್ತು. ಶಿರ್ಕ್–ಬಿದ್‌ಅತ್‌ಗಳು ಎಷ್ಟು ಬಲಹೀನ. ಒಂದನ್ನು ಮುಚ್ಚುವಾದ ಇನ್ನೊಂದು ಹೊರ ಬರುತ್ತದೆ. ಕೇವಲ ಕೇರಳ ಮತ್ತು ಕರ್ನಾಟಕದಲ್ಲಿ ಮಾತ್ರವಿರುವುದು ಹೇಗೆ ಪ್ರವಾದಿ ಚರ್ಯೆಯಾದೀತು ? ಹಾಗಿದ್ದರೆ ಮುಸ್ಲಿಯಾರ್‌ಗಳು ಪ್ರತಿಪಾದಿಸುವ ಸುನ್ನಿಸಮ್ ಕೇರಳ–ಕರ್ನಾಟಕಕ್ಕೆ ಮಾತ್ರ ಸೀಮಿತವೇ ?

## ಮೌಲಿದಿಗಾಗಿ ಸ್ವಹಾಬಿಗಳ ಹೆಸರಲ್ಲೂ ಸುಳ್ಳು:

ಅಲ್ ಅನ್ಸಾರ್ ಬಿಡುವ ಬಡಾಯಿ ಹೀಗಿದೆ: ["ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೌಲಿದ್ ಪಾರಾಯಣಕ್ಕೆ ಯಾರಾದರೂ ಒಂದು ದಿರ್‌ಹಮ್ ಖರ್ಚು ಮಾಡಿದರೆ ಅವನು ಸ್ವರ್ಗದಲ್ಲಿ ನನ್ನ ಆತ್ಮೀಯ ಮಿತ್ರನಾಗಿರುವನು."– ಅಬೂಬಕರ್ ಸಿದ್ದೀಕ್ (ﷺ).] (ಅಲ್ ಅನ್ಸಾರ್, ಆಗಸ್ಟ್ 15–28, 1995, ಪುಟ 97).

ಮೇಲಿನಂತೆ ಇತರ ಸ್ವಹಾಬಿಗಳ ಹೆಸರಲ್ಲೂ ಸುಳ್ಳು ವಚನಗಳು ಅದೇ ಅಲ್ ಅನ್ಸಾರ್‌ನಲ್ಲಿ ಇದೆ. ಅವೆಲ್ಲವೂ ಅಪ್ಪಟ ಸುಳ್ಳುಗಳಾಗಿವೆ. ಸತ್ಯವಾಗಿದ್ದರೆ ಆ ವಚನಗಳು ಉಲ್ಲೇಖಿತಗೊಂಡ ಗ್ರಂಥದ ಹೆಸರನ್ನು ಯಾಕೆ ಅಲ್ ಅನ್ಸಾರ್ ಪ್ರಕಟಿಸಲಿಲ್ಲ. ಮೂರು ಶತಮಾನಗಳ ಬಳಿಕ ಪ್ರಾರಂಭಗೊಂಡಿತೆಂದು ಸುನ್ನೀ ಮುಸ್ಲಿಯಾರ್‌ಗಳೇ ಸಮ್ಮತಿಸುವ ಮೌಲಿದನ್ನು ಪ್ರಥಮ ಶತಮಾನದ ಅಬುಬಕರ್ ಸಿದ್ದೀಕ್(ﷺ) ಮತ್ತು ಇತರ ಸ್ವಹಾಬಿಗಳು ಹೇಗೆ ಪ್ರೋತ್ಸಾಹಿದರು ?

## ಮೌಲಿದಿಗೆ ಪುರಾವೆ ಇಸ್ಲಾಮಿನ ಬದ್ಧ ವೈರಿ ಅಬೂಲಹಬ್‌ನ ಪ್ರವಾದಿ ಪ್ರೇಮ(?):

ಸುನ್ನೀ ಪುರೋಹಿತರ ಮುಖ ಪತ್ರ ಬರೆಯುತ್ತದೆ: "ಪ್ರವಾದಿವರ್ಯರು(ﷺ) ಜನಿಸಿದ ಶುಭ ವಾರ್ತೆ ಕೇಳಿ ದೊಡ್ಡಪ್ಪ ಅಬೂಲಹಬ್ ತನ್ನ ವಂಶದಲ್ಲಿ ಗಂಡು ಮಗು ಜನಿಸಿದ ಸಂತಸಕ್ಕೆ ಓರ್ವ ದಾಸಿಯನ್ನು ಜೀತ ಮುಕ್ತಗೊಳಿಸಿದ್ದ. ಮುಂದೆ ಅಬೂಲಹಬ್ ವೈರಿಯಾದ. ಕಡು ದುಷ್ಟನಾದ. ಆದರೂ ಅವನಿಗೆ ಪ್ರವಾದಿವರ್ಯರು(ಸ) ಜನಿಸಿದ ಪ್ರತೀ ಸೋಮವಾರ ದಿನ ನರಕ ಶಿಕ್ಷೆ ಇಳಿಮುಖವಾಗುವುದೆಂದು ಸಾಬೀತಾಗಿದೆ." (ಅಲ್ ಅನ್ಸಾರ್, ಆಗಸ್ಟ್ 15–28, 1995, ಪುಟ 6).

ಅದರೆ ಅಬೂಲಹಬ್‌ನೆದುರು ಶಾಪ ಪ್ರಾರ್ಥನೆ ಮಾಡಬೇಕೆಂಬ ಸಂದೇಶವನ್ನು ಕುರ್‌ಆನ್ ನೀಡುವುದನ್ನು ನೋಡಿರಿ:

تَبَّتْ يَدَا أَبِي لَهَبٍ وَتَبَّ "ಅಬೂಲಹಬನ ಎರಡು ಕೈಗಳೂ ನಾಶವಾಗಲಿ. ಮತ್ತು ಅವನು ನಾಶವಾದನು."

ಯಾವುದನ್ನು ಸ್ವೀಕರಿಸಬೇಕು ? ಕುರ್‌ಆನಿನ ಸಂದೇಶವನ್ನೇ. ಮುಸ್ಲಿಯಾರ್‌ಗಳ ಸಂದೇಶವನ್ನೇ ?

## ಉಪವಾಸ ಅನುಷ್ಠಿಸಲು ಪ್ರವಾದಿ(ﷺ)ರವರು ಹೇಳಿದ ವಚನ ಮೃಷ್ಟಾನ್ನ ಭೋಜನಕ್ಕೆ ಪುರಾವೆ:

ನಬಿ ಜಯಂತಿ ಆಚರಿಸಲು ಅಲ್ ಅನ್ಸಾರಿನ ಪುರಾವೆಯೊಂದು ಹೀಗಿದೆ: "ಸಹಾಬಿಗಳು ಪ್ರವಾದಿಯೊಂದಿಗೆ ಪ್ರತೀ ಸೋಮವಾರ ಉಪವಾಸ ಅನುಷ್ಠಿಸುವ ಕುರಿತು ಪ್ರಶ್ನಿಸಿದಾಗ ಅವರು ಹೀಗೆಂದರು: ನನ್ನ ಜನನ ಮತ್ತು ವಹ್ಯ್ ಅವತರಣ ಪ್ರಸ್ತುತ ದಿನದಲ್ಲಾಯಿತು." (ಅಲ್ ಅನ್ಸಾರ್, ಆಗಸ್ಟ್ 15–28, 1995, ಪುಟ 65).

ಕುರಾಫಿಗಳ ವಕ್ರ ಬುದ್ಧಿಯೇ, ಹುಷಾರ್. ರಬೀಉಲ್ ಅವ್ವಲ್ ತಿಂಗಳಿಡೀ ಮೌಲಿದ್ ಆಚರಿಸಿ ಮೃಷ್ಟಾನ್ನ ಭೋಜನವನ್ನು ಗಿಟ್ಟಿಸಲು ಹಗಲಿಡೀ ಹಸಿದಿರುವ ಉಪವಾಸ ಪುರಾವೆಯಂತೆ. !!!

## ಪ್ರವಾದಿ(ﷺ)ರವರನ್ನು ಹೇಗೆ ಪ್ರೀತಿಸಬೇಕು:

ಪ್ರವಾದಿ ಸ್ನೇಹದ ದ್ಯೋತಕವಾಗಿ ನಾವು ನಿರ್ವಹಿಸುವ ಸರ್ವ ಕಾರ್ಯಗಳೂ ಅಲ್ಲಾಹ್ ಮತ್ತು ರಸೂಲ್(ﷺ)ರವರು ಕಲಿಸಿದ ರೀತಿಯಲ್ಲೇ ಆಗಿರಬೇಕು. ಯಾಕೆಂದರೆ ಅಲ್ಲಾಹ್ ಹೇಳಿರುವನು: ﴿وَمَا آتَاكُمُ الرَّسُولُ فَخُذُوهُ وَمَا نَهَاكُمْ عَنْهُ فَانتَهُوا﴾ "…..ಸಂದೇಶವಾಹಕರು ನಿಮಗೆ ಏನನ್ನು ಕೊಡುತ್ತಾರೋ ಅದನ್ನು ಸ್ವೀಕರಿಸಿರಿ ಮತ್ತು ಅವರು ಯಾವುದರಿಂದ ನಿಮ್ಮನ್ನು ತಡೆದಿರುವರೋ ಅದರಿಂದ ದೂರವಿರಿ……" (ಸೂರತುಲ್ ಹಶ್ರ್, 59:7).

ಪ್ರವಾದಿ(ﷺ)ರವರು ಹೇಳಿದ್ದಾಗಿ ಅನಸ್(ﷺ) ವರದಿ ಮಾಡುತ್ತಾರೆ: “ಯಾರಾದರೂ ನನ್ನ ಸುನ್ನತ್ತನ್ನು ಪ್ರೀತಿಸಿದರೆ ಅವನು ನನ್ನನ್ನು ಪ್ರೀತಿಸಿದಂತೆ. ಯಾರಾದರೂ ನನ್ನನ್ನು ಪ್ರೀತಿಸಿದರೆ ಅವನು ಸ್ವರ್ಗದಲ್ಲಿ ನನ್ನೊಂದಿಗೆ ಇರುವನು.” (ಮಿಷ್ಕಾತ್).

ಆದುದರಿಂದ ಪ್ರವಾದಿ ಸ್ನೇಹವೆಂದರೆ ಪ್ರವಾದಿವರ್ಯರ ಸುನ್ನತಿನ ಸ್ನೇಹವಾಗಿದೆ. ಪ್ರವಾದಿ(ﷺ)ರವರ ಸುನ್ನತನ್ನು ಜೀವನದಲ್ಲಿ ಅಳವಡಿಸುವುದೇ ನಿಜವಾದ ಪ್ರವಾದಿ ಸ್ನೇಹವಾಗಿದೆ. ಪ್ರವಾದಿ ಮುಹಮ್ಮದ್(ﷺ)ರವರನ್ನು ಅನುಸರಿಸುತ್ತಾ, ಅವರು ವಿರೋಧಿಸಿದ್ದನ್ನು ಕೈ ಬಿಡುತ್ತಾ ಅವರನ್ನು ಪ್ರೀತಿಸೋಣ. ಆಧಾರವಿಲ್ಲದ ಕಟ್ಟುಕಥೆಗಳು ಹಾಗೂ ಪ್ರವಾದಿ(ﷺ)ರವರು ವಿರೋಧಿಸಿದ, ಸ್ವರ್ಗ ನಿಷಿದ್ಧವೆಂದು ಮುನ್ನೆಚ್ಚರಿಕೆ ನೀಡಿದ ಶಿರ್ಕ್ ತುಂಬಿರುವ ಮೌಲಿದ್ ಕಿತಾಬನ್ನೂ, ಬಿದ್‌ಅತ್ ಆದ ಮಿಲಾದುನ್ನಬಿ ಆಚರಣೆಯನ್ನೂ ಕೈ ಬಿಡುವುದೇ ಪ್ರವಾದಿ ಸ್ನೇಹ. ಅಲ್ಲಾಹನು ಸರ್ವ ಶಿರ್ಕ್ ಬಿದ್‌ಅತ್‌ಗಳಿಂದಲೂ ನಮ್ಮನ್ನು ಸಂರಕ್ಷಿಸಿ ಅನುಗ್ರಹಿಸಲಿ. ಆಮೀನ್.


**ಪ್ರಕಟಣೆ**

***ಕರ್ನಾಟಕ ಸಲಫಿ ಅಸೋಸಿಯೇಷನ್ ದಮ್ಮಾಮ್–ಖೋಬರ್ ಘಟಕ***



**✆ 0567388901, 0508831878, 0506739851**

E mail: info@salafiksa.org, www.salafiksa.org



**KSA Madrasa Dammam**

Place: ICC Dammam (Near Sieko Building)

Saturday: 3:00pm – 6:30pm

Sunday: 5:00pm – 7:45pm,

Monday: 5:00pm – 7:45pm

**KSA Madrasa Khobar**

Place: Near Sharee Court – Aqrabia, 4th Street

Day & Timing:

Wednesday: 5pm – 7:30pm

Saturday: 2:00pm – 7:00pm